# ಪ್ರೀತಿಯೇ ಜೀವನ

◆ ಸ್ವಾಮಿ ನಿತ್ಯಸ್ಥಾನಂದ

### ಪ್ರೀತಿಯೇ ಸರ್ವಸ್ವ

ನಮ್ಮ ಶಾಸ್ತ್ರದಲ್ಲಿ ಆತ್ಯಂತಿಕ ಸತ್ಯವನ್ನು 'ರಸಸ್ವರೂಪ' (ರಸೋ ವೈ ಸಃ) ಎಂದು ವರ್ಣಿಸಲಾಗಿದೆ. ಆ ರಸವು ಸಾಮಾನ್ಯ ರಸವಲ್ಲ, ಆನಂದ ರಸ. ಆದ್ದರಿಂದ ಆ ಸತ್ಯ ಆನಂದ ಸ್ವರೂಪವೂ ಹೌದು. ಈ ಜಗತ್ತಿನಲ್ಲಿ ಎಲ್ಲರಿಗೂ ಅತ್ಯಂತ ಪ್ರಿಯವಾದುದೇ ಈ ಆನಂದ. ದುಃಖವನ್ನು ಪ್ರೀತಿಸುವ ಕೆಲವರು ಕೂಡ ಆ ದುಃಖದಲ್ಲಿಯೇ ಆನಂದವನ್ನು ಅನುಭವಿಸುತ್ತಾರೆ. ಪ್ರಿಯ ಮತ್ತು ಪ್ರೀತಿ ಒಂದೇ ಶಬ್ದಮೂಲದಿಂದ ಬಂದವುಗಳು. ಪ್ರೀತಿಯೆ ಎಲ್ಲಕ್ಕಿಂತ ಅಧಿಕ ಆನಂದದಾಯಕವಾದುದು, ಏಕೆಂದರೆ ಭಗವಂತನ ಆನಂದ ಸ್ವರೂಪವೇ ಶುದ್ಧ ಪ್ರೀತಿಯ ರೂಪದಲ್ಲಿ ವ್ಯಕ್ತವಾಗುತ್ತದೆ. ಮಧುಸೂದನ ಸರಸ್ವತಿಗಳು ಹೇಳುತ್ತಾರೆ:

> ಭಗವಾನ್ ಪರಮಾನಂದಸ್ವರೂಪಃ ಸ್ವಯಮೇವ ಹಿ ।
> ಮನೋಗತಸ್ತದಾಕಾರ ರಸತಾಮೇತಿ ಪುಷ್ಕಲಾಮ್ ॥

"ಪರಮಾನಂದಸ್ವರೂಪನಾದ ಭಗವಂತನು ತಾನೇ ಮನುಷ್ಯರ ಹೃದಯದಲ್ಲಿ ರಸಾಧಿಕ್ಯದಿಂದ ಅಭಿವ್ಯಕ್ತನಾಗುತ್ತಾನೆ." ಆ ರಸವೇ ಪ್ರೀತಿಯ ರೂಪದಲ್ಲಿ ವ್ಯಕ್ತವಾಗುತ್ತದೆ. ಮನಸ್ಸು ಪರಿಶುದ್ಧವಾದಷ್ಟೂ ಆ ಪ್ರೀತಿ ಹೆಚ್ಚು ಹೆಚ್ಚು ಅಭಿವ್ಯಕ್ತವಾಗುತ್ತದೆ ಮತ್ತು ಸ್ವಾರ್ಥಪರವಾದ ಪ್ರೀತಿ ನಿಃಸ್ವಾರ್ಥವಾಗುತ್ತ ಹೋಗುತ್ತದೆ. ಇದನ್ನೇ ಭಗವಂತನ ಕಡೆಗೆ ಹರಿಸಿದಾಗ ಪರಾಭಕ್ತಿಯಾಗುತ್ತದೆ, ಜೀವಿಯ ಕಡೆ ಹರಿಸಿದಾಗ ಜೀವಕಾರುಣ್ಯದ ರೂಪದಲ್ಲಿ ವ್ಯಕ್ತವಾಗುತ್ತದೆ ಮತ್ತು ವ್ಯಕ್ತಿಯು ಬುದ್ಧ, ಕ್ರಿಸ್ತ, ಶ್ರೀರಾಮಕೃಷ್ಣ, ವಿವೇಕಾನಂದರಂತಹ ಮಹಾಪುರುಷರಲ್ಲಿದ್ದ ಹೃದಯವೈಶಾಲ್ಯವನ್ನು ಪಡೆಯುತ್ತಾನೆ.

> ಒಂದು ಕಟ್ಟಡವನ್ನು ಇಟ್ಟಿಗೆ ಮತ್ತು ಕಲ್ಲುಗಳಿಂದ ಕಟ್ಟಬಹುದು. ಆದರೆ ಮನೆಯನ್ನು ಕಟ್ಟುವುದು ಪ್ರೀತಿಯಿಂದ.
>
> —ಅನಾಮಿಕ

ಈ ಪ್ರೀತಿಯೇ ಸಾಮಾನ್ಯ ಮಾನವರಲ್ಲಿ, ಅವರವರ ಪರಿಮಿತಿಯ ಮೂಲಕ ಅಭಿವ್ಯಕ್ತವಾಗುತ್ತ ವಿಷಯಪ್ರೀತಿಯಾಗಿ, ಮಾತೃವಾತ್ಸಲ್ಯವಾಗಿ, ದಾಂಪತ್ಯ ಪ್ರೇಮವಾಗಿ ಇನ್ನೂ ಅನೇಕ ಬಗೆಯ ಪ್ರೀತಿರೂಪಗಳಲ್ಲಿ ವ್ಯಕ್ತವಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಪ್ರೇಮವೇ ಎಲ್ಲಕ್ಕಿಂತ ಸ್ಪಷ್ಟವಾಗಿ ಕಾಣುವ ವಸ್ತು. ಈ ಶಕ್ತಿಯೇ ಸೂರ್ಯ, ಚಂದ್ರ, ತಾರಾವಳಿಗಳನ್ನು ಸಂಚರಿಸುವಂತೆ ಮಾಡುತ್ತಿರುವುದು. ಈ ಪ್ರೀತಿಯೊಂದೇ ಸ್ತ್ರೀಪುರುಷ ಪ್ರಾಣಿಗಳಲ್ಲಿ, ಎಲ್ಲ ಕಡೆಗಳಲ್ಲಿಯೂ ಪ್ರತಿ ಪರಮಾಣುವಿನಲ್ಲಿಯೂ ವ್ಯಕ್ತವಾಗುತ್ತಿದೆ. ಆಕರ್ಷಣ ಮುಂತಾದ ಬಾಹ್ಯ ಶಕ್ತಿಗಳಲ್ಲಿ ಅದು ವ್ಯಕ್ತವಾಗುತ್ತಿದೆ. ಈ ಪ್ರಪಂಚದ ಏಕಮಾತ್ರ ಕ್ರಿಯೋತ್ತೇಜಕ ಶಕ್ತಿ ಪ್ರೇಮವೊಂದೇ. ಇದು ಸರ್ವವ್ಯಾಪಿಯಾಗಿರುವುದು. ಇದು ಸ್ವಯಂ ಭಗವಂತನೇ ಆಗಿರುವುದು" (ಕೃತಿಶ್ರೇಣಿ, ೩.೨೫೨).

### ಚೈತನ್ಯವೊಂದೇ ಪ್ರಿಯವಾದುದು

ನಾವು ನಿಜವಾಗಿ ಪ್ರೀತಿಸುವುದು ಚೈತನ್ಯವನ್ನು, ಜಡ ವಸ್ತುವನ್ನಲ್ಲ. ಎಲ್ಲಿ ಚೈತನ್ಯದ ಅಭಿವ್ಯಕ್ತಿ ಅಧಿಕವಿರುತ್ತದೆಯೋ ಆ ಕಡೆ ನಮ್ಮ ಪ್ರೀತಿಯೂ ಅಧಿಕವಾಗಿ ಹರಿಯುತ್ತದೆ. ನಮ್ಮಲ್ಲಿಯೂ ಚೈತನ್ಯದ ಅಭಿವ್ಯಕ್ತಿ ಅಧಿಕವಾದಷ್ಟೂ ಅದು ಹೆಚ್ಚು ಪ್ರೀತಿಯ ರೂಪದಲ್ಲಿ ಹೊರಹೊಮ್ಮುತ್ತದೆ. ನಾವು ಒಂದು ವಸ್ತುವನ್ನು ಪ್ರೀತಿಸುವುದಕ್ಕೂ ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ವಸ್ತುವಿನ ಪ್ರೀತಿ ಅದರ ಉಪಯುಕ್ತತೆಯನ್ನು ಅವಲಂಬಿಸಿರುತ್ತದೆ. ನಾವು ಪ್ರೀತಿಸುವ ವಸ್ತುವನ್ನು ಬದಲಾಯಿಸಬಹುದು. ನನ್ನಲ್ಲಿ ಒಂದು ಕೈಗಡಿಯಾರವಿದ್ದರೆ, ಅಷ್ಟೇ ಅಥವಾ ಅದಕ್ಕಿಂತ ಉತ್ತಮವಾದ ಕೈಗಡಿಯಾರವನ್ನು ಯಾರಾದರೂ ಕೊಟ್ಟರೆ, ಹಳೆಯದನ್ನು ಬಿಟ್ಟು ಹೊಸದನ್ನು ಸ್ವೀಕರಿಸಬಹುದು. ಆದರೆ ವ್ಯಕ್ತಿಪ್ರೀತಿಯಲ್ಲಿ ಹೀಗಾಗುವುದಿಲ್ಲ—ತಾಯಿ ತನ್ನ ಮಗುವನ್ನು ಬೇರೊಂದು ಸುಂದರ ಮಗುವಿನೊಂದಿಗೆ ಬದಲಾಯಿಸಿಕೊಳ್ಳಲಾರಳು. ತನ್ನ ಮಗುವಿನೊಡನೆ ಅವಳು ತಾದಾತ್ಮ್ಯಭಾವವನ್ನು ಹೊಂದಿರುತ್ತಾಳೆ. ಇದೇ ರೀತಿಯ ತಾದಾತ್ಮ್ಯಭಾವ ಒಂದು ವಸ್ತುವಿನೊಡನೆ ಉಂಟಾಗುವುದಿಲ್ಲ. ಆದ್ದರಿಂದಲೇ ನಮಗೆ ಇಷ್ಟವಾದ ವಸ್ತುವನ್ನು ಬದಲಾಯಿಸಲು ಸಾಧ್ಯ.

ಆದರೆ ಒಬ್ಬ ವ್ಯಕ್ತಿಯ ಮೇಲಿನ ಪ್ರೀತಿಯನ್ನು ತೆಗೆದು ಇನ್ನೊಬ್ಬ ವ್ಯಕ್ತಿಯ ಮೇಲೆ ಇಡಲಾಗುವುದಿಲ್ಲ—ನಮ್ಮ ಪ್ರೀತಿಯ ವಲಯಕ್ಕೆ ಇನ್ನೊಬ್ಬನನ್ನೂ ಸೇರಿಸಿಕೊಳ್ಳಬಹುದು, ಅಷ್ಟೇ. ಆ ವ್ಯಕ್ತಿಯ ಮೇಲಿನ ಪ್ರೀತಿ ಸ್ವಾರ್ಥೋದ್ದೇಶದಿಂದ ಕೂಡಿದ್ದರೂ ಅದರಲ್ಲಿ ಸ್ವಲ್ಪವಾದರೂ ಶುದ್ಧ ಪ್ರೀತಿಯ ಅಂಶ ಇದ್ದೇ ಇರುತ್ತದೆ. ಸ್ವಾರ್ಥಪ್ರೇರಿತ ಪ್ರೀತಿ ಹೊರಟುಹೋದರೂ ಶುದ್ಧ

ಬದುಕಿಗೆ ಪ್ರೀತಿ ಮೂಲಭೂತ ಆವಶ್ಯಕತೆ ಎಂದು ತಿಳಿಸಿರುವ ಸ್ವಾಮಿ ನಿತ್ಯಸ್ಥಾನಂದರು ತಮ್ಮ ವಿಚಾರಪೂರ್ಣವಾದ ಬರಹಗಳಿಗೆ ಖ್ಯಾತರಾಗಿದ್ದಾರೆ. ಈ ಪತ್ರಿಕೆಯ ಪ್ರಥಮ ಸಂಪಾದಕರಾಗಿದ್ದ ಅವರ ಅನೇಕ ಕೃತಿಗಳು ಹಾಗೂ ಅನುವಾದಗಳು ಮುದ್ರಿತವಾಗಿವೆ.

ಪ್ರೀತಿ ಹಾಗೆಯೇ ಉಳಿದಿರುತ್ತದೆ. ಪ್ರೀತಿ ಎಂದರೆ ಒಂದ ನ್ನೊಂದು ಬೆಸೆಯುವ ಶಕ್ತಿ—ವ್ಯಕ್ತಿ ವ್ಯಕ್ತಿಗಳನ್ನು ಒಂದುಗೂಡಿಸುವ ಶಕ್ತಿ. ಪ್ರತ್ಯೇಕತೆಯ ಭಯವೇ ದ್ವೇಷವಾಗಿ ಪರಿಣಮಿಸುತ್ತದೆ. ನಾನು ಪ್ರೀತಿಸುವ ವ್ಯಕ್ತಿ ನನ್ನಿಂದ ಪ್ರತ್ಯೇಕವಾಗುತ್ತಾನೆ ಎಂಬ ಭಯವೇ ದ್ವೇಷಕ್ಕೆ ಮೂಲ. ಆದ್ದರಿಂದಲೇ ನಾವು ಪ್ರೀತಿಸುವ ವ್ಯಕ್ತಿ ನಮ್ಮ ಸ್ವಂತದವರಾಗಿರಬೇಕೆಂಬ ಸ್ವಾಧೀನತಾ ಭಾವ ಇರುತ್ತದೆ. ಈ ಸ್ವಾಧೀನತೆಗೆ ಅಡ್ಡಿಯಾಗುವ ಎಲ್ಲವನ್ನೂ ಎಲ್ಲರನ್ನೂ ದ್ವೇಷಿಸುತ್ತೇವೆ, ಮತ್ತು ನಮ್ಮ ಸ್ವಾಧೀನತೆಯಿಂದ ದೂರವಾಗುವ ವ್ಯಕ್ತಿಯನ್ನೂ ದ್ವೇಷಿಸುತ್ತೇವೆ.

ಪ್ರೀತಿ ಮುಂತಾದ ಭಾವಾಭಿವ್ಯಕ್ತಿಯು ವ್ಯಕ್ತಿಯನ್ನು ಕುರಿತೇ, ತೀವ್ರವಾಗಿರುತ್ತದೆ. ವಸ್ತುವನ್ನು ಕುರಿತು ಅಲ್ಲ. ನಾವು ಯಾವುದೇ ವಸ್ತುವನ್ನೂ ಒಬ್ಬ ವ್ಯಕ್ತಿಯನ್ನು ಪ್ರೀತಿಸುವಷ್ಟು ತೀವ್ರವಾಗಿ ಪ್ರೀತಿಸಲಾಗುವುದಿಲ್ಲ. ಈ ತಾರತಮ್ಯಕ್ಕೆ ಏನು ಕಾರಣ? ನಾವು ವಸ್ತುವಿಗಿಂತ ಸಸ್ಯವನ್ನು ಹೆಚ್ಚು ಪ್ರೀತಿಸುತ್ತೇವೆ, ಅದಕ್ಕಿಂತ ಹೆಚ್ಚು ಪ್ರಾಣಿಯನ್ನು ಮತ್ತು ಅದಕ್ಕಿಂತಲೂ ಹೆಚ್ಚು ಮನುಷ್ಯನನ್ನು ಪ್ರೀತಿಸುತ್ತೇವೆ. ಕಾರಣ ಸಸ್ಯ, ಪ್ರಾಣಿ ಮತ್ತು ಮನುಷ್ಯರಲ್ಲಿ ಚೈತನ್ಯದ ಅಭಿವ್ಯಕ್ತಿ ಹಂತಹಂತವಾಗಿ ಅಧಿಕಾಧಿಕವಾಗಿರುವುದರಿಂದ. ಒಮ್ಮೆ ದೇವರ ಮೇಲೆ ಪ್ರೀತಿ ಉಂಟಾದರೆ ಅವನನ್ನು ಪ್ರೀತಿಸುವಷ್ಟು ತೀವ್ರವಾಗಿ ಮತ್ತಾವುದನ್ನೂ ಮತ್ತಾರನ್ನೂ ಪ್ರೀತಿಸಲಾಗುವುದಿಲ್ಲ. ಏಕೆಂದರೆ ದೇವರಲ್ಲಿ ಚೈತನ್ಯದ ಪೂರ್ಣ ಅಭಿವ್ಯಕ್ತಿ ಇರುತ್ತದೆ. ದೇವರೆಂದರೆ ಚೈತನ್ಯವೇ, ಅವನು ಚಿನ್ಮಯ. ಆದ್ದರಿಂದ ಶ್ರೀರಾಮಕೃಷ್ಣರಂತಹ ಮಹಾಪುರುಷರು ದೇವರನ್ನು ಪ್ರೀತಿಸಿದಷ್ಟು ಮತ್ತೇನನ್ನೂ ಪ್ರೀತಿಸಲಿಲ್ಲ, ಅವರ ಮತ್ತೆಲ್ಲ ಪ್ರೀತಿಯೂ ಭಗವತ್ಪ್ರೀತಿಯ ಅಭಿವ್ಯಕ್ತಿಯೇ ಆಗಿತ್ತು. ಆದ್ದರಿಂದ ನಾವು ನಿಜವಾಗಿ ಪ್ರೀತಿಸುವುದು ಚೈತನ್ಯವನ್ನೇ. ಈ ಸಂದರ್ಭದಲ್ಲಿ ಯಾಜ್ಞವಲ್ಕ್ಯರು ಮೈತ್ರೇಯಿಗೆ ನೀಡಿದ ಉಪದೇಶವನ್ನು ಸ್ಮರಿಸಿಕೊಳ್ಳಬಹುದು. ಪತಿ, ಪತ್ನಿ, ತಂದೆ, ತಾಯಿ ಮುಂತಾದ ಎಲ್ಲರನ್ನೂ ನಾವು ಪ್ರೀತಿಸುವುದು ಆತ್ಮನಿಗಾಗಿಯೇ ಹೊರತು ಅವರವರಿಗಾಗಿ ಅಲ್ಲ; "ಎಲ್ಲವೂ ಆತ್ಮನಿಗಾಗಿಯೇ ಪ್ರಿಯವಾಗುತ್ತವೆ" (**ಆತ್ಮನಸ್ತು ಕಾಮಾಯ ಸರ್ವಂ** ಪ್ರಿಯಂ ಭವತಿ) ಎಂದು ಅವನು ಉಪದೇಶಿಸುತ್ತಾನೆ.

### ಪ್ರೀತಿಯು ಮೂಲಭೂತ ಆವಶ್ಯಕತೆ

ಇಂದು ನಾವು ಪ್ರೀತಿಯ ಅಭಾವದ ಕುರಿತು ಹೆಚ್ಚು ಮಾತನಾಡುತ್ತೇವೆ. ಇಂದು ನಾವು ಯಂತ್ರಯುಗದಲ್ಲಿ ವಾಸಿಸುತ್ತಿದ್ದೇವೆ. ನಾವು ವ್ಯಕ್ತಿಗಳೊಡನೆ ವ್ಯವಹರಿಸುವುದಕ್ಕಿಂತ ಯಂತ್ರಗಳೊಡನೆ ವ್ಯವಹರಿಸುವುದೇ ಅಧಿಕ. ವ್ಯಕ್ತಿಗಳೊಡನೆಯೂ ಯಂತ್ರದ ಮೂಲಕವೇ ವ್ಯವಹರಿಸಲು ಇಷ್ಟಪಡುತ್ತೇವೆ. ನಾವು ನೇರವಾಗಿ ವ್ಯಕ್ತಿಗಳೊಡನೆ ಮಾತನಾಡುವ ಬದಲು ಸೆಲ್‌ಫೋನ್ ಮೂಲಕ ಮಾತನಾಡಲು ಇಷ್ಟಪಡುತ್ತೇವೆ. ಹತ್ತಿರದ ವ್ಯಕ್ತಿಯನ್ನು ಕಡೆಗಣಿಸಿ ದೂರದ ವ್ಯಕ್ತಿಯೊಡನೆ ಸಂಪರ್ಕವನ್ನು ಬಯಸುತ್ತೇವೆ. ನಮ್ಮ ಸುತ್ತಮುತ್ತಲಿನ ವ್ಯಕ್ತಿಗಳಿಗಿಂತ ಟಿ.ವಿ. ಪರದೆಯ ಹಿಂದಿರುವ ವ್ಯಕ್ತಿಗಳೇ ಮುಖ್ಯವಾಗುತ್ತಾರೆ. ನಾವು ಹೀಗೆ ಯಂತ್ರಗಳೊಡನೆ ವ್ಯವಹರಿಸುತ್ತ ನಮ್ಮ ಜೀವನವೂ ಯಾಂತ್ರಿಕವಾಗುತ್ತಿದೆ. ಯಂತ್ರ ಹೇಗೆ ಪ್ರೀತಿಸಲಾರದೊ ಹಾಗೆಯೇ ನಾವೂ ಪ್ರೀತಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದೇವೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಪ್ರೀತಿಯೇ ಜೀವನ, ಅದೊಂದೇ ಜೀವನದ ನಿಯಮ; ಎಲ್ಲ ಸ್ವಾರ್ಥವೂ ಮೃತ್ಯು; ಮತ್ತು ಇಹಪರಗಳೆರಡರಲ್ಲಿಯೂ ಇದು ಸತ್ಯ" ಎಂದು (ಕೃತಿಶ್ರೇಣಿ ೪.೨೦೬). ಆದ್ದರಿಂದ ನಾವು ಪ್ರೀತಿ ಇಲ್ಲದೆ ಬಾಳಲಾರೆವು. ಈಗ ನಾವು ಬದುಕಿರುವುದು ನಮ್ಮಲ್ಲಿ ಸ್ವಲ್ಪವಾದರೂ, ಜೀವ ಹಿಡಿದಿರಿಸಿಕೊಳ್ಳುವಷ್ಟಾದರೂ, ಪ್ರೀತಿ ಇರುವುದರಿಂದ. ಯಾರು ಯಾರನ್ನೂ ಯಾವುದನ್ನೂ ಪ್ರೀತಿಸುವುದಿಲ್ಲವೊ—ತನ್ನನ್ನೂ ಕೂಡ—ಅವನು ಬದುಕಲಾರ, ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಮಿಖೈಲ್ ನೈಮಿ ಎಂಬ ಚಿಂತಕರ ಅಭಿಪ್ರಾಯದಲ್ಲಿ, "ಪ್ರೀತಿ ಎನ್ನುವುದು ಒಂದು ಸದ್ಗುಣವಲ್ಲ, ಅದು ಮೂಲಭೂತ ಆವಶ್ಯಕತೆ. ಅನ್ನ ನೀರಿಗಿಂತಲೂ ಗಾಳಿ ಬೆಳಕಿಗಿಂತಲೂ ಅದು ಹೆಚ್ಚು ಆವಶ್ಯಕ" (*The Book of Mirdad*, p. 64).

> **ದಯೆ ಇಲ್ಲದವನನ್ನು ಮನುಷ್ಯ ಎಂದು ಕರೆಯಲಾದೀತೆ ?**
> — ಶ್ರೀಮಾತೆ ಶಾರದಾದೇವಿ

ಈ ಹೇಳಿಕೆ ಅನೇಕ ಪ್ರಯೋಗಗಳ ಮೂಲಕ ಪ್ರಮಾಣಿತವಾಗಿದೆ. ಹಿಂದೆ ಇಂಗ್ಲೆಂಡಿನ ರಾಜನೊಬ್ಬನು (ಅವನ ಹೆಸರು ನೆನಪಿಲ್ಲ) ಒಂದು ಕ್ರೂರವಾದ ಪ್ರಯೋಗ ಮಾಡಿದನಂತೆ. ಅವನು ಸುಮಾರು ಹನ್ನೆರಡು-ಹದಿಮೂರು ಜನ ತುಂಬು ಗರ್ಭಿಣಿಯರನ್ನು ಆರಿಸಿಕೊಂಡು, ಅವರು ಶಿಶುವನ್ನು ಹೆತ್ತಕೂಡಲೆ ಆ ಶಿಶುಗಳನ್ನು ಅವರಿಂದ ಪ್ರತ್ಯೇಕಿಸಿ ಅವರ ಸಂಪರ್ಕವಿಲ್ಲದೆ ಬೇರೆಯಾಗಿ ಸಾಕುವ ವ್ಯವಸ್ಥೆ ಮಾಡುತ್ತಾನೆ. ಒಬ್ಬಳು ದಾದಿ ಬಂದು ಆ ಶಿಶುಗಳಿಗೆ ಆಹಾರ ನೀಡುತ್ತಿದ್ದಳು ಮತ್ತು ಬೇರೆ ಅಗತ್ಯಗಳನ್ನು ಒದಗಿಸುತ್ತಿದ್ದಳು. ಆದರೆ ಆ ಮಕ್ಕಳನ್ನು ಮುದ್ದಿಸುತ್ತಿರಲಿಲ್ಲ, ಆವಶ್ಯಕತೆಗಿಂತ ಹೆಚ್ಚಾಗಿ ಸ್ಪರ್ಶಿಸುತ್ತಿರಲಿಲ್ಲ, ಮತ್ತು ಬೇರೆ ಯಾವುದೇ ರೀತಿಯಲ್ಲಿಯೂ ಸ್ವಲ್ಪವೂ ಪ್ರೀತಿಯನ್ನು ತೋರಿಸುತ್ತಿರಲಿಲ್ಲ. ಹೀಗೇ ಕೆಲವು ತಿಂಗಳುಗಳು ಆದಮೇಲೆ ಪ್ರೀತಿಯ ಸ್ಪರ್ಶದಿಂದ ವಂಚಿತರಾದ ಆ ಮಕ್ಕಳು ಒಂದೊಂದಾಗಿ ಪ್ರಾಣತ್ಯಾಗ ಮಾಡಿದವಂತೆ. ಭೌತಿಕ ಬೆಳವಣಿಗೆಗೂ ಪ್ರೀತಿ ಆವಶ್ಯಕವೆಂದು ವಿಜ್ಞಾನಿಗಳು ಹೇಳುತ್ತಾರೆ. ಸಸ್ಯಪ್ರಾಣಿಗಳೂ ಪ್ರೀತಿಗೆ ಸ್ಪಂದಿಸುತ್ತವೆ ಎಂಬುದು ಪ್ರಾಯೋಗಿಕ ಸತ್ಯ.

### ಪ್ರೀತಿಗಾಗಿ ಪ್ರೀತಿ

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಾವೆಲ್ಲ ವ್ಯಾಪಾರಿಗಳು. ಜೀವನದಲ್ಲಿ ವ್ಯಾಪಾರಿಗಳು, ಸದ್ಗುಣಗಳಲ್ಲಿ ವ್ಯಾಪಾರಿಗಳು, ಧರ್ಮದಲ್ಲಿ ವ್ಯಾಪಾರಿಗಳು. ಅಯ್ಯೋ! ಪ್ರೀತಿಯಲ್ಲಿಯೂ ನಾವು ವ್ಯಾಪಾರಿಗಳು" (ಕೃತಿಶ್ರೇಣಿ, ೬.೨೪೫). ನಾವು ಹೂವೇ

ಮುಂತಾದ ಸುಂದರ ವಸ್ತುಗಳನ್ನೂ ದೃಶ್ಯಗಳನ್ನೂ ಪ್ರೀತಿಸುತ್ತೇವೆ. ಆದರೆ ಅವುಗಳಿಂದ ಏನನ್ನೂ ನಿರೀಕ್ಷಿಸುವುದಿಲ್ಲ. ಏಕೆಂದರೆ ಸೌಂದರ್ಯವನ್ನು ಪ್ರೀತಿಸುವುದು ನಮ್ಮ ಸ್ವಭಾವ. ಇಲ್ಲಿ ಪ್ರೀತಿ ನಮಗೆ ಆನಂದವನ್ನು ನೀಡುತ್ತದೆ—ಪ್ರೀತಿಯ ಸ್ವರೂಪವೇ ಆನಂದವಾಗಿರುವುದರಿಂದ. ಈ ಆನಂದವೇ ನಮ್ಮ ಪ್ರೀತಿಗೆ ಸಿಗುವ ಬಳುವಳಿ, ಇನ್ನಾವುದನ್ನೂ ನಾವು ನಿರೀಕ್ಷಿಸುವುದಿಲ್ಲ, ನಿರೀಕ್ಷಿಸಿದರೆ ಆ ಆನಂದಕ್ಕೆ ತಡೆಯುಂಟಾಗುತ್ತದೆ. ನಿರೀಕ್ಷಿಸಿದುದು ನಮಗೆ ದೊರೆತರೂ ಶುದ್ಧ ಪ್ರೀತಿಯ ಆನಂದ ನಮಗೆ ಲಭ್ಯವಾಗುವುದಿಲ್ಲ. ಇದೇ ರೀತಿ ಏನನ್ನೂ ಪ್ರತಿಯಾಗಿ ನಿರೀಕ್ಷಿಸದೆ ಇತರ ವ್ಯಕ್ತಿಗಳನ್ನೂ ನಾವು ಪ್ರೀತಿಸುವಂತಾಗಬೇಕು.

ಪ್ರೀತಿಗೆ ಪ್ರೀತಿಯೇ ಪ್ರತಿಫಲ, ನಮ್ಮ ಪ್ರೀತಿಸುವ ಸಾಮರ್ಥ್ಯವೇ ನಮಗೆ ಸಂತೃಪ್ತಿಯನ್ನೂ ಸಾರ್ಥಕತೆಯನ್ನೂ ನೀಡಬೇಕು. ನಾವು ಇತರರನ್ನು ಪ್ರೀತಿಸುವುದು ನಮಗೆ ಆವಶ್ಯಕ, ನಮ್ಮ ಬೆಳವಣಿಗೆಗೆ ಆವಶ್ಯಕ ಎಂಬುದನ್ನು ನಾವು ಮನಗಾಣಬೇಕು. ಆಗ ಇತರರಿಂದ ನಾವು ಹೆಚ್ಚು ನಿರೀಕ್ಷಿಸದೆ, ಅವರ ಪ್ರೀತಿಯ ಪ್ರತಿಸ್ಪಂದನವನ್ನೂ ನಿರೀಕ್ಷಿಸದೆ ಅವರನ್ನು ಪ್ರೀತಿಸಲು ಸಾಧ್ಯ. ನಾವು ಇತರರನ್ನು ಪ್ರೀತಿಸಿದರೂ ಅವರು ನಮ್ಮನ್ನು ಪ್ರತಿಯಾಗಿ ಪ್ರೀತಿಸದಿದ್ದಾಗ ಅವರಲ್ಲಿರುವ ಆಂತರಿಕ ಕೊರತೆ ನಮ್ಮಲ್ಲಿ ಮರುಕವನ್ನು ಹುಟ್ಟಿಸಬೇಕು. ಇಲ್ಲವೆ, ಅವರು ಪ್ರತಿಯಾಗಿ ಪ್ರೀತಿಸದಿರುವುದಕ್ಕೆ ನಮ್ಮ ಪ್ರೀತಿಯಲ್ಲಿಯೇ ಏನೋ ದೋಷವಿರಬಹುದೆಂದು ಭಾವಿಸಬೇಕು. ನಮ್ಮ ಪ್ರೀತಿಯ ಹಿಂದೆ ಏನಾದರೂ ಸ್ವಾರ್ಥೋದ್ದೇಶ ಇದ್ದಿರಬಹುದು, ಅವರ ಪ್ರೀತಿಯ ಪ್ರತಿಸ್ಪಂದನದ ನಿರೀಕ್ಷೆ ಇದ್ದಿರಬಹುದು. ಇಂತಹ ನಿರೀಕ್ಷೆಗಳಿದ್ದಾಗ ಪ್ರೀತಿ ಯಥಾರ್ಥವಾಗಿರುವುದಿಲ್ಲ, ಮುಕ್ತವಾಗಿ ಹರಿಯುವುದಿಲ್ಲ. ಪ್ರಸಿದ್ಧ ಮನಶ್ಶಾಸ್ತ್ರಜ್ಞ ಎರಿಕ್ ಫ್ರೋಮ್ ಹೇಳುತ್ತಾರೆ: "ನಿಮ್ಮ ಪ್ರೀತಿ ಇತರರಲ್ಲಿ ಪ್ರೀತಿಯನ್ನು ಜಾಗ್ರತಗೊಳಿಸದಿದ್ದರೆ, ಅಂದರೆ ನಿಮ್ಮ ಪ್ರೀತಿಯ ಮೂಲಕ ನೀವು ಇತರರಿಗೆ ಪ್ರಿಯರಾಗಲು ಅಸಮರ್ಥರಾದರೆ, ಆಗ ನಿಮ್ಮ ಪ್ರೀತಿ ನಿಃಸತ್ತ್ವವಾದುದು ಮತ್ತು ಅದೊಂದು ದುರದೃಷ್ಟ." (*Beyond the Chains of Illusion*, p.66).

ನಾವು ಯಾರನ್ನು ಪ್ರೀತಿಸುತ್ತೇವೆಯೊ ಅವರು ನಮ್ಮ ಸ್ವಂತದವರಾಗಿರಬೇಕು, ಅವರು ನಾವು ಹೇಳಿದಂತೆ ಕೇಳಬೇಕು, ನಮ್ಮ ಭಾವನೆಗಳನ್ನೂ ಆದರ್ಶಗಳನ್ನೂ ಒಪ್ಪಿಕೊಳ್ಳಬೇಕು ಎಂದು ಮುಂತಾಗಿ ನಾವು ಬಯಸುತ್ತೇವೆ. ಒಟ್ಟಿನಲ್ಲಿ ಅವರು ನಮ್ಮ ಸ್ವಾಧೀನದಲ್ಲಿರಬೇಕು ಎಂದು ಅಪೇಕ್ಷಿಸುತ್ತೇವೆ. ಅನೇಕರ ಪರೋಪಕಾರವೂ ಇತರರನ್ನು ತಮ್ಮ ವಶಪಡಿಸಿಕೊಳ್ಳುವ ಉದ್ದೇಶವನ್ನು, ಅವರಿಗೇ ತಿಳಿಯದ ರೀತಿಯಲ್ಲಿ, ಹೊಂದಿರುತ್ತದೆ. ಆ ಉದ್ದೇಶ ಪೂರ್ಣ ಸಫಲವಾಗದಿದ್ದರೆ ಅವರು ತುಂಬ ವೇದನೆಯನ್ನು ಅನುಭವಿಸುತ್ತಾರೆ. ಇದು ಅವರ ಆಂತರಿಕ ಶೂನ್ಯತೆ ಅಥವಾ ಅಹಂಕಾರದ ಹಸಿವನ್ನು ಸೂಚಿಸುತ್ತದೆ. ಅವರ ಪ್ರೀತಿ ಆ ಹಸಿವನ್ನು ತೀರಿಸಿಕೊಳ್ಳುವ ಉದ್ದೇಶವನ್ನು ಹೊಂದಿದ್ದು ಪರಿಮಿತವಾಗಿರುತ್ತದೆ. ಪ್ರೀತಿ ಎಂದರೆ ಆಂತರಿಕ ಶೂನ್ಯತೆಯನ್ನು ತುಂಬಿಸಿಕೊಳ್ಳುವ ಪ್ರಯತ್ನವಲ್ಲ, ನಮ್ಮ ಅಂತರಂಗವನ್ನು ವಿಸ್ತರಿಸುವ ಪ್ರಯತ್ನ. ತನ್ನ ವೈಯಕ್ತಿಕ ಪರಿಧಿಗೆ ಸೀಮಿತವಾದ ಪ್ರಜ್ಞೆಯುಳ್ಳ ಒಬ್ಬ ವ್ಯಕ್ತಿಯು ತನ್ನ ಪ್ರಜ್ಞೆಯನ್ನು ವಿಸ್ತರಿಸುತ್ತ ತನ್ನ ಕುಟುಂಬವನ್ನೂ ತಾನಿರುವ ಸಮಾಜವನ್ನೂ ಕೊನೆಗೆ ಇಡೀ ಮಾನವಕೋಟಿಯನ್ನೂ ತನ್ನ ಪ್ರಜ್ಞಾವಲಯದೊಳಗೆ ಸೇರಿಸಿಕೊಳ್ಳುವ ಆಧ್ಯಾತ್ಮಿಕ ಬೆಳವಣಿಗೆಯನ್ನೇ ಪ್ರೀತಿ ಎನ್ನುವುದು.

> ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದೆಂದರೆ ಆ ವ್ಯಕ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವುದೆಂದಲ್ಲ, ಅವನು ತನ್ನ ವಿಶಿಷ್ಟ ಮನುಷ್ಯತ್ವವನ್ನು ಉಳಿಸಿಕೊಳ್ಳಲು ಸಂತೋಷದಿಂದ, ಅವನಿಗೆ ಪೂರ್ಣಹಕ್ಕನ್ನು ನೀಡುವುದು.
>
> —ಡಾ॥ ಹ್ಯಾರಿ ಎ. ಓವರ್‌ಸ್ಟ್ರೀಟ್

### ಆತ್ಮಪ್ರೀತಿ

ಇತರರನ್ನು ಪ್ರೀತಿಸಬೇಕಾದರೆ ಮೊದಲು ನಮ್ಮನ್ನು ನಾವು ಪ್ರೀತಿಸಬೇಕು. ನಮ್ಮನ್ನು ನಾವು ಪ್ರೀತಿಸುವುದೆಂದರೆ ಆತ್ಮವಿಶ್ವಾಸವನ್ನು ಹೊಂದಿರುವುದು, ತನ್ನ ಬಗ್ಗೆ ಕೀಳರಿಮೆ ಇಲ್ಲದಿರುವುದು, ತನ್ನನ್ನು ತಾನು ಪವಿತ್ರ, ಪರಿಪೂರ್ಣ, ದಿವ್ಯ ಎಂದು ಪರಿಗಣಿಸುವುದು. ಈ ರೀತಿ ತನ್ನ ಬಗ್ಗೆ ಆರೋಗ್ಯಕರ ಮನೋಭಾವವಿದ್ದರೆ ಮಾತ್ರ ಇತರರನ್ನು ಪ್ರೀತಿಸಲು ಸಾಧ್ಯ. "ಮಾನಸಿಕ ರೋಗದ ಮೂಲದಲ್ಲಿ ಆತ್ಮಪ್ರೀತಿಯ ಕೊರತೆ ಇರುವುದು ಅನೇಕ ಸಂದರ್ಭಗಳಲ್ಲಿ ಕಂಡುಬಂದಿದೆ. ಜನರು ತಮ್ಮ ಬಗ್ಗೆ ತಿರಸ್ಕಾರ ಮನೋಭಾವವಿಲ್ಲದೆ ಆರೋಗ್ಯಕರ ಪ್ರೀತಿಯನ್ನು ಹೊಂದಿದ್ದರೆ ಮಾನಸಿಕ ರೋಗದ ಅರ್ಧದಷ್ಟು ಹೊರೆ ನಮಗೆ ಕಡಮೆಯಾಗುತ್ತಿತ್ತು" ಎಂದು ಪ್ರಸಿದ್ಧ ಮನೋವೈದ್ಯ ಡಾ. ಅಲೆಕ್ಸಾಂಡರ್ ರೀಡ್ ಮಾರ್ಟಿನ್ ಹೇಳುತ್ತಾರೆ. ತನ್ನ ಬಗ್ಗೆ ತಿರಸ್ಕಾರ ದ್ವೇಷ ಮನೋಭಾವವಿದ್ದರೆ ತಾನು ಮಾನಸಿಕ ರೋಗದಿಂದ ನರಳುವುದು ಮಾತ್ರವಲ್ಲದೆ, ವ್ಯಕ್ತಿಯು ಇತರರನ್ನು ಪ್ರೀತಿಸುವ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತಾನೆ. ತನ್ನನ್ನು ಪ್ರೀತಿಸುವುದೆಂದರೆ ಸ್ವಾರ್ಥಿಯಾಗಿರುವುದೆಂದಲ್ಲ. ಸ್ವಾರ್ಥ ನಿಜವಾಗಿಯೂ ಆಂತರಿಕ ಕೊರತೆಯನ್ನು ಸೂಚಿಸುತ್ತದೆ. ಆದ್ದರಿಂದ ಅದು ನಿಜವಾದ ಆತ್ಮಪ್ರೀತಿಯಲ್ಲ, ಅದಕ್ಕೆ ಬದಲಾಗಿ ಅದು ಒಂದು ಶೂನ್ಯತೆಯ ಭಾವ. ಆದರೆ ಪ್ರೀತಿ ಎನ್ನುವುದು ಪೂರ್ಣತೆಯ ಭಾವ.

### ನಿರುಪಾಧಿಕ ಪ್ರೀತಿ

ಪ್ರೀತಿಯು ಕುರುಡು ಎಂಬ ಹೇಳಿಕೆಯಿದೆ. ಸಾಮಾನ್ಯವಾಗಿ ಪ್ರೀತಿಸುವ ವ್ಯಕ್ತಿಯ ದೋಷಗಳನ್ನು ನಾವು ನೋಡುವುದಿಲ್ಲ ಅಥವಾ ದೋಷಗಳೂ ಗುಣಗಳಾಗಿ ಕಾಣುವುವು. ಇದನ್ನೇ ಪ್ರೀತಿಯ ಕುರುಡುತನ ಎಂದು ಕರೆಯುವುದು. ಆದರೆ ವ್ಯಕ್ತಿಯ ದೋಷಗಳನ್ನು ನೋಡಿಯೂ ಅವನನ್ನು ಪ್ರೀತಿಸುವುದು ಮುಖ್ಯ, ಅವನ ದೋಷಗಳು ನಮ್ಮ ಪ್ರೀತಿಯನ್ನು ಹ್ರಸ್ವಗೊಳಿಸುವ ಬದಲು ಅವನ ಬಗ್ಗೆ ನಮ್ಮಲ್ಲಿ ಹೆಚ್ಚು ಕಳಕಳಿ ಉಂಟಾಗಬೇಕು. ಒಬ್ಬ ತುಂಬ ಸ್ವಾರ್ಥಿ ಇದ್ದ. ಅವನ ನಡತೆ ಸರಿಯಿರಲಿಲ್ಲ.

> **ಪ್ರೀತಿಯೇ ಜೀವನ, ದ್ವೇಷವೇ ಮರಣ...**
> **ಯಾರು ಇನ್ನೊಬ್ಬನನ್ನು ಪ್ರೀತಿಸುವನೋ ಅವನು ಮಾತ್ರ ಬದುಕಿರವನು, ಅವನೇ ಜೀವಂತನು.**
> **—ಸ್ವಾಮಿ ವಿವೇಕಾನಂದ.**

ಎಲ್ಲರೂ ಅವನಿಂದ ದೂರವಿರುತ್ತಿದ್ದರು. ಅವನು ತುಂಬ ಖಿನ್ನನಾಗಿ ಒಂಟಿತನದಿಂದ ನರಳುತ್ತಿದ್ದ. ಎಲ್ಲರೂ "ನೀನು ಬದಲಾಗಬೇಕು" ಎನ್ನುತ್ತಿದ್ದರು. ಅವನು ಬದಲಾಗುವುದನ್ನು ಅಪೇಕ್ಷಿಸದೆ ಅವನನ್ನು ಪ್ರೀತಿಸುವವರು ಯಾರೂ ಇರಲಿಲ್ಲ. ಅವನು ಬದಲಾಗಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಇದು ಆತನನ್ನು ಮತ್ತಷ್ಟು ದುಃಖಿಯನ್ನಾಗಿ ಮಾಡಿತು. ಅವನ ಸ್ನೇಹಿತರೂ ಕೂಡ ನೀನು ಬದಲಾಗಲೇಬೇಕು ಎನ್ನುತ್ತಿದ್ದರು. ಒಂದು ದಿನ ಅವನು ಒಬ್ಬ ಮಹಾಪುರುಷನನ್ನು ಸಂಧಿಸಿದ. ಅವನು ಹೇಳಿದ : "ನೀನು ಬದಲಾಗಬೇಕಾಗಿಲ್ಲ, ನೀನು ಹೇಗಿರುವೆಯೋ ಹಾಗೆಯೇ ನಾನು ನಿನ್ನನ್ನು ಪ್ರೀತಿಸುತ್ತೇನೆ." ಈ ಮಾತು ಆ ವ್ಯಕ್ತಿಗೆ ಅತ್ಯಂತ ಆಪ್ಯಾಯಮಾನವಾಯಿತು. ಮೊಟ್ಟಮೊದಲಿಗೆ ಅವನು ತನ್ನ ಹೃದಯದಲ್ಲಿ ಅಪೂರ್ವ ಆನಂದವನ್ನು ಅನುಭವಿಸಿದನು. ಆ ಮಹಾಪುರುಷನ ಮಾತೇ ಆತನನ್ನು ಬದಲಾಯಿಸಿತು (ಆಧಾರ: ಅಂಥೋಣಿ ಡ ಮೆಲ್ಲೊ, *The Song of the Bird*).

ಇಂತಹ ಪ್ರೀತಿಯ ಆವಿರ್ಭಾವವನ್ನು ನಾವು ಶ್ರೀಮಾತೆ ಶಾರದಾದೇವಿಯವರಲ್ಲಿ ಕಾಣುತ್ತೇವೆ. ಅವರು ಮಾತೃಪ್ರೇಮದ ಸಾಕಾರಮೂರ್ತಿಯಾಗಿದ್ದರು. ಅವರು ಸಜ್ಜನ ದುರ್ಜನರೆಲ್ಲರನ್ನೂ ಸಮಾನವಾಗಿ ಪ್ರೀತಿಸಿದರು. ದರೋಡೆಕಾರ ಅಮಜಾದನೂ ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರಷ್ಟೇ ಅವರ ಪ್ರಿಯಪುತ್ರನಾಗಿದ್ದ. "ನೀನು ದುಷ್ಟ, ಕಳ್ಳ. ನೀನು ಈ ರೀತಿ ಕದಿಯುವುದಾದರೆ ನನ್ನ ಹತ್ತಿರ ಬರಬೇಡ. ನೀನು ಬದಲಾದ ಹೊರತು ನಾನು ನಿನ್ನನ್ನು ಹತ್ತಿರ ಸೇರಿಸುವುದಿಲ್ಲ" ಎಂದು ಅವರು ಅವನಿಗೆ ಹೇಳಲಿಲ್ಲ. ಅವನು ಹೇಗಿದ್ದನೋ ಹಾಗೆಯೇ ಅವನನ್ನು ಸ್ವೀಕರಿಸಿದರು. ತಾಯಿಯ ಪ್ರೀತಿಯ ಸ್ವರೂಪ ಅಂತಹುದು. "ದಯೆಯಿಲ್ಲದವನನ್ನು ಮನುಷ್ಯ ಎಂದು ಕರೆಯಲಾದೀತೆ?" ಎಂದು ಶ್ರೀಮಾತೆಯವರು ಕೇಳುತ್ತಾರೆ. ಇಂದಿನ ಸ್ಪರ್ಧಾತ್ಮಕ ಯಾಂತ್ರಿಕ ವಾಣಿಜ್ಯ ಯುಗದಲ್ಲಿ, ತನ್ನ ಪಾಡು ತನಗೆ ಅವರ ಪಾಡು ಅವರಿಗೆ ಎಂಬ ಮನೋಭಾವದ ಜನರ ಹೃದಯದಲ್ಲಿ ಈ ಮಾತೃಪ್ರೇಮದ ಒಂದು ಹನಿಯಾದರೂ ಜಿನುಗುವಂತಾದರೆ ಆಗ ಸಮಾಜದ ಸ್ವರೂಪವೇ ಬದಲಾಗುವುದಿಲ್ಲವೇ?

> "ನಾನು ನಾಲ್ಕು ತಿಂಗಳಿಂದ ಅಮೆರಿಕಾ ದೇಶದಲ್ಲಿರುವೆನು. ಮಸಾಚುಸೆಟ್ಸ್‌ನಲ್ಲಿ ಅಪರಾಧಿಗಳನ್ನು ತಿದ್ದುವುದಕ್ಕಾಗಿ ಇರುವ ಸೆರೆಮನೆಯನ್ನು ನೋಡಿದೆನು. ಆ ಜೈಲಿನಲ್ಲಿರುವ ಅಧಿಕಾರಿಗೆ, ಅಪರಾಧಿಗಳನ್ನು ಅಲ್ಲಿಗೆ ಯಾವ ತಪ್ಪಿಗಾಗಿ ಕಳುಹಿಸಿರುವರೊ ಗೊತ್ತಿಲ್ಲ. ಅಲ್ಲಿ ಅಪರಾಧಿಗಳನ್ನು ದಯೆಯಿಂದ ನೋಡಿಕೊಳ್ಳುತ್ತಾರೆ. ಮತ್ತೊಂದು ಊರಿನಲ್ಲಿ ಬಹಳ ವಿದ್ಯಾವಂತರ ಸಂಪಾದಕತ್ವದಲ್ಲಿ ನಡೆಯುತ್ತಿರುವ ಮೂರು ವೃತ್ತಪತ್ರಿಕೆಗಳು ಇದ್ದವು. ಅಪರಾಧಿಗಳಿಗೆ ಉಗ್ರವಾದ ಶಿಕ್ಷೆ ಆವಶ್ಯಕ ಎಂದು ಈ ಪತ್ರಿಕೆಗಳು ವಾದಿಸುತ್ತವೆ. ಮತ್ತೊಂದು ಪತ್ರಿಕೆಯಾದರೊ ದಯೆ ಶಿಕ್ಷೆಗಿಂತ ಹೆಚ್ಚು ಪರಿಣಾಮಕಾರಿ ಎಂದು ಸಾರುವುದು. ಒಂದು ವೃತ್ತಪತ್ರಿಕೆ ಅಂಕಿಅಂಶಗಳ ಆಧಾರದ ಮೇಲೆ ಉಗ್ರ ಶಿಕ್ಷೆಯನ್ನು ಪಡೆದ ನೂರು ಅಪರಾಧಿಗಳಲ್ಲಿ ಐವತ್ತು ಜನ ಮಾತ್ರ ತಮ್ಮ ಜೀವನವನ್ನು ಸರಿಪಡಿಸಿಕೊಂಡಿರುವರು ಎಂದೂ, ಬಹಳ ಕಡಿಮೆ ಶಿಕ್ಷೆ ಪಡೆದ ಪ್ರಯೋಜನದಿಂದ ಸುಮಾರು ನೂರರಲ್ಲಿ ತೊಂಬತ್ತು ಜನ ಜೀವನದಲ್ಲಿ ಉದ್ಯೋಗಗಳನ್ನು ಅವಲಂಬಿಸಿ ಉತ್ತಮರಾದರು ಎಂದೂ ಸಾರುತ್ತದೆ."
>
> **—ಸ್ವಾಮಿ ವಿವೇಕಾನಂದ.** (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೪೨೦)

### ತಾಯಿಯ ಹೃದಯ

ಒಬ್ಬ ಯುವಕನು ಮಹಿಳೆಯೊಬ್ಬಳಲ್ಲಿ ಅನುರಕ್ತನಾಗಿದ್ದ. ಆಕೆಯನ್ನು ಅವನು ಎಷ್ಟು ಪ್ರೀತಿಸುತ್ತಿದ್ದನೆಂದರೆ ತನ್ನ ತನವನ್ನೇ ಕಳೆದುಕೊಂಡು ಅವಳಿಗೆ ದಾಸನಾಗಿದ್ದ. ಅವಳು ಕೇಳಿದುದನ್ನೆಲ್ಲ ತಂದುಕೊಡುತ್ತಿದ್ದ. ಆಕೆಯ ಬೇಡಿಕೆಗೂ ಕೊನೆಯಿರಲಿಲ್ಲ. ಒಮ್ಮೆ ಅವಳು ಅಸಾಧ್ಯವಾದ ಬೇಡಿಕೆಯೊಂದನ್ನು ಅವನ ಮುಂದಿಟ್ಟಳು, "ನಿನ್ನ ತಾಯಿಯ ಹೃದಯವನ್ನು ನನಗೆ ತಂದುಕೊಡು" ಎಂದು. ಪ್ರೇಮೋನ್ಮತ್ತನಾದ ಅವನು ಆ ಬೇಡಿಕೆಯ ಪರಿಣಾಮವನ್ನು ಭಾವಿಸದಾದ. ಅವನು ತನ್ನ ತಾಯಿಯ ಹತ್ತಿರ ಹೋಗಿ "ನಿನ್ನ ಹೃದಯವನ್ನು ಕೊಡು" ಎಂದು ಕೇಳಿಯೇಬಿಟ್ಟ. ತಾಯಿ ತನ್ನ ಎದೆಯನ್ನು ಬಗೆದು ಹೃದಯವನ್ನು ತೆಗೆದು ಅವನ ಕೈಗಿತ್ತಳು. ಅವನು ಹುಚ್ಚನಂತೆ ಅದನ್ನು ತೆಗೆದುಕೊಂಡು ತನ್ನ ಪ್ರಿಯೆಯ ಹತ್ತಿರ ಓಡಿದ. ದಾರಿಯ ಮಧ್ಯದಲ್ಲಿ ಅವನು ಎಡವಿ ಬಿದ್ದ. ಹೃದಯ ಅವನ ಕೈಯಿಂದ ಜಾರಿ ಕೆಳಗೆ ಬಿತ್ತು. ಆಗ ಆ ಹೃದಯದಿಂದ ಮರುಕ ಧ್ವನಿಯೊಂದು ಕೇಳಿಸಿತು: "ಮಗು, ಪೆಟ್ಟಾಯಿತೆ?"

***ಪ್ರಾಯೋಜಕರು***: Corporation Bank , 13/1, 4-13/2, Temple Road, P.B. No.4, V V Mohalla Mysore - 570 002